ಅಧ್ಯಕ್ಷರು : ನಾನು ಅದನ್ನೇ ತಮಗೆ ಹೇಳಿದ್ದೇನೆ. ನಾವು ಏನು ನಿರ್ಣಯವನ್ನು ಪ್ರಪ್ಪೋಸ್ ಮಾಡಿಕೊಂಡು ಬಂದು ಇಲ್ಲಿ ಪಾಸ್ ಮಾಡುತ್ತೇವೆ, ಆ ಸಂದರ್ಭದಲ್ಲಿ ಚರ್ಚೆ ಮಾಡುವಾಗ ತಾವು ಹೇಳಬೇಕಾಗಿದ್ದನ್ನೆಲ್ಲ ಹೇಳಿ ಒಂದು 10 ನಿಮಿಷನಂತರ ಹೇಳಿ, ನಾನು ತಮ್ಮಯಾರ ಅಭಿಪ್ರಾಯಗಳನ್ನು ತಡೆಯುವುದಕ್ಕೆ ಹೋಗುವುದಿಲ್ಲ. I think I have your consent. ಈಗ ಸಭೆಯನ್ನು ಮುಂದೂಡಿ ಬಹುಶಃ 12 ಗಂಟೆಗೆ ಮೊದಲನೆ ಏನೂ ಆಗುವುದಿಲ್ಲ, ಪುನಃ 12 ಗಂಟೆಗೆ ಸೇರೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಆ ನಿರ್ಣಯವನ್ನು ಓದಲಿಕ್ಕೇ 10 ನಿಮಿಷಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಮೊದಲೇ ನಿರ್ಣಯ ಮಾಡಿದ್ದರೆ ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆ ಸರ್ಕಾರವೇ ಸ್ವಯಂ ಪ್ರೇರಣೆಯಿಂದ ಮಾಡಬೇಕಾಗಿತ್ತು.

ಅಧ್ಯಕ್ಷರು : ಅದನ್ನೆಲ್ಲಾ ಚರ್ಚೆ ಮಾಡೋಣ ಬನ್ನಿ ಈಗ ಸಭೆಯನ್ನು ಮುಂದೂಡಿ ಪುನಃ 12 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯು ಪುನಃ ಸಂಜೆ 4.20ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಸರ್ಕಾರಿ ನಿರ್ಣಯ ಆಲಮಟ್ಟಿ ಡ್ಯಾಂ ಕುರಿತು

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಎರಡು ದಿನಗಳ ಹಿಂದೆ ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಒಂದು ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಕೆಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದೆ; ಹಾಗೂ ತಾವೆಲ್ಲರೂ ಓದಿದ್ದೀರಿ. ಅಧಿಕೃತವಾಗಿ ಈ ಬಗ್ಗೆ ನನಗೆ ಸರ್ಕಾರದಿಂದ ಯಾವುದೇ ಅಧಿಕಾರಿಯಿಂದ ಮಾಹಿತಿ ಬಂದಿಲ್ಲ. ಆದರೂ ಈ ವಿಷಯ ನಿನ್ನೆ ರಾಜ್ಯಸಭೆಯಲ್ಲಿ ಪ್ರಸ್ತಾಪವಾಯಿತು. ಕೇಂದ್ರ ಸರ್ಕಾರದವರು ಇದುವರೆಗೆ ಇದರ ಬಗ್ಗೆ ಯಾವುದೇ ನಿಲುವನ್ನು ತಾಳಿಲ್ಲ ಅಂದಮೇಲೆ ವಿರೋಧಪಕ್ಷದ ನಾಯಕರುಗಳೊಡನೆ ಸಮಾಲೋಚನೆ ಮಾಡಿ ನಾವೂ ಸಹಿತ ನಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಚರ್ಚೆ ಮಾಡಿರತಕ್ಕದ್ದು ಒಂದು ವರದಿಯ ಆಧಾರದ ಮೇಲೆ. ಆ ವರದಿಯ ಬಗ್ಗೆ ನಮಗೆ ಯಾವುದೇ ಮನ್ನಣೆ ಇಲ್ಲ, ಪರಿಶೀಲಿಸಿಲ್ಲ, ಅದು ನಮಗೆ ಲೆಕ್ಕಕ್ಕೂ ಇಲ್ಲ. ಆದರೂ ನಾವು ನಮ್ಮ ರಾಜ್ಯದ ನಿಲುವನ್ನು ಸ್ಪಷ್ಟಪಡಿಸಬೇಕೆಂಬುದಕ್ಕೋಸ್ಕರ ನಾವೆಲ್ಲ ಸೇರಿ ಒಂದು ನಿರ್ಣಯವನ್ನು ಮಾಡಿದ್ದೇವೆ. ಬಚಾವತ ಆವಾರ್ಡ್‌ನಲ್ಲಿ ನಾವು ನಡೆದುಕೊಂಡಿರುವುದು ಹೇಗೆ, ಆಂಧ್ರಪ್ರದೇಶ ಹೇಗೆ ನಡೆದುಕೊಂಡಿದೆ ಇದನ್ನು ದೇಶಕ್ಕೆ ತಿಳಿಸಬೇಕು, ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು ಮತ್ತು ಇದಕ್ಕೆ ಸಂಬಂಧಪಟ್ಟವರು ಯಾರಿದ್ದಾರೆ ಅವರಿಗೆ ತಿಳಿಸಬೇಕೆಂಬ ಕಾರಣ, ಬೆಳಗಿನಿಂದ ಎಲ್ಲ ಮುಖಂಡರು ಸೇರಿ ವಿಚಾರ ಮಾಡಿ, ನಮ್ಮ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಕೇಳಿ ತಯಾರಿಸಿರತಕ್ಕ ಸರ್ವಪಕ್ಷಗಳ ಸರ್ವಸಮ್ಮತದ ನಿರ್ಣಯವನ್ನು ನಾನು ತಮ್ಮ ಅನುಮತಿ ಪಡೆದು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ನಿರ್ಣಯ ಈ ರೀತಿ ಇದೆ.

ಕರಡು ನಿರ್ಣಯ

ಕೃಷ್ಣಾ ನದಿ ನ್ಯಾಯಾಧೀಕರಣವು ತನ್ನ 1973ರ ವರದಿ ಹಾಗೂ 1976ರ ಮುಂದಿನ ವರದಿಗಳಲ್ಲಿ ಶೇಕಡ 75ರ ಆದಾರದ ಅನುಸಾರ ಪ್ರಮಾಣವಾದ ಲಭ್ಯತೆ ಇರುವ 2060 ಟಿ.ಎಂ.ಸಿ. ಪ್ರಮಾಣದಷ್ಟು ನೀರನ್ನು ಸ್ಕೀಮ್ 'ಎ' ಅನುಸಾರ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಿದೆ.

ಮಹಾರಾಷ್ಟ್ರ	---	650	ಟಿ.ಎಂ.ಸಿ.
ಕರ್ನಾಟಕ	---	700	ಟಿ.ಎಂ.ಸಿ.
ಆಂಧ್ರಪ್ರದೇಶ	---	800	ಟಿ.ಎಂ.ಸಿ

ಸದರಿ ನ್ಯಾಯಾಧೀಕರಣವು, ಹೆಚ್ಚುವರಿ ನೀರಿನ ಅಂದರೆ 2060 ಟಿ.ಎಂ.ಸಿ. ಪ್ರಮಾಣಕ್ಕಿಂತ ಹೆಚ್ಚುವರಿ ಆದ ನೀರನ್ನು ಮೂರೂ ರಾಜ್ಯಗಳಿಗೆ ಸ್ಕೀಮ್ 'ಬಿ' ಅನುಸಾರ ಈ ಕೆಳಗೆ ಸೂಚಿಸಿರುವ ಪ್ರಮಾಣದಂತೆ ಹಂಚಿಕೆ ಮಾಡಬೇಕೆಂದು ಸಹ ತಿಳಿಸಿದೆ.

2060 ಟಿ.ಎಂ.ಸಿ.ಗೆ ಮೇಲ್ಪಟ್ಟು ಹಾಗೂ 2130 ಟಿ.ಎಂ.ಸಿ. ವರೆಗಿನ ನೀರನ್ನು

ಕರ್ನಾಟಕ	---	50
ಮಹಾರಾಷ್ಟ್ರ	---	35
ಆಂಧ್ರಪ್ರದೇಶ	---	15

2130 ಟಿ.ಎಂ.ಸಿ. ಪ್ರಮಾಣಕ್ಕಿಂತ ಹೆಚ್ಚುವರಿಯಾದ ನೀರನ್ನು

ಕರ್ನಾಟಕ	---	50
ಮಹಾರಾಷ್ಟ್ರ	---	25
ಆಂಧ್ರಪ್ರದೇಶ	---	25

ಸದರಿ ನ್ಯಾಯಾಧೀಕರಣವು ತನ್ನ ವರದಿಯಲ್ಲಿ (ಸಂಪುಟ - IIಪುಟ 166) ಕೆಳಕಂಡಂತೆ ಹೇಳಿದೆ.

> ``After deeply pondering over the matter we have come to the conclusion that it would be better if we devise two schemes for the division of the waters of the river Krishna between the States of Maharashtra, Mysore and Andhra Pradesh. These schemes will be called Schemes `A' and `B' Scheme `A' will come in operation on the date of the publication of the decision of this Tribunal] in the Official Gazetter under Section 6 of the Inter State Water Disputes Act, 1956. Scheme `B' may be brought into

operation in case the States of Maharashtra, Mysore and Andhra Pradesh constitute an inter-state administrative authority which may be called the Krishna Valley Authority by agreement is constituted by legislation made by Parliament. Scheme `A' does not at all depend upon the agreement of the parties and comes into operation by virtue of the order of the Tribunal. It is altogether independent of Schemes `B"`.

ಭಾರತ ಸರ್ಕಾರವು 2060 ಟಿ.ಎಂ.ಸಿ. ನೀರನ್ನು ರಾಜ್ಯಗಳಿಗೆ ಹಂಚುವ ಸ್ಕೀಮ್ 'ಎ' ಅನ್ನು ಮಾತ್ರ ಅನುಷ್ಠಾನಗೊಳಿಸಿದೆ.

ಈ ಮಧ್ಯೆ ಆಂಧ್ರಪ್ರದೇಶವು ಸ್ಕೀಮ್'ಬಿ' ಯನ್ನು ಕಾರ್ಯಗತಗೊಳಿಸುವುದಕ್ಕೆ ತನ್ನ ಒಪ್ಪಿಗೆಯನ್ನು ನಿರಾಕರಿಸುತ್ತಾ ಏಕಸ್ವಾಮ್ಯವಾಗಿ ಮತ್ತು ಕಾನೂನಿಗೆ ವಿರುದ್ಧವಾಗಿ ಹೆಚ್ಚುವರಿ ಉಳಿಕೆ ನೀರನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಹಲವಾರು ಯೋಜನೆಗಳನ್ನು ರೂಪಿಸಿ, ಇವುಗಳಿಗೆ ಸಂಬಂಧಪಟ್ಟ ಶಾಶ್ವತವಾದ ಕಾಮಗಾರಿಗಳನ್ನು ಕೈಗೊಂಡಿದೆ, ಈ ಕಾಮಗಾರಿಗಳು ಯಾವುವೆಂದರೆ, ತೆಲುಗುಗಂಗಾ ಯೋಜನೆ, ಶ್ರೀ ಶೈಲಂ ಎಡದಂಡೆ ಕಾಲುವೆ ಯೋಜನೆ, ಶ್ರೀ ಶೈಲಂ ಬಲದಂಡೆ ಕಾಲುವೆ ಯೋಜನೆ, ಭೀಮ ಏತ ನೀರಾವರಿ ಯೋಜನೆ ಮತ್ತು ಪುಲಚಿಂತಲಾ ಡೈವರ್ಷನ್‌ಯೋಜನೆ.

ಆದುದರಿಂದ ಭಾರತ ಸರ್ಕಾರವನ್ನು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ಕೋರಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸಿದೆ.

(ಅ) ನ್ಯಾಯಾಧೀಕರಣದ ತೀರ್ಪಿನಲ್ಲಿ ತಿಳಿಸಿರುವ ಮಾರ್ಗಸೂಚಿಯ ಕಟ್ಟುನಿಟ್ಟಿಗೆ ಒಳಪಟ್ಟಂತೆ ಹಾಗೂ ಇತರೆ ಯಾವುದೇ ಸಂಬಂಧಪಡದ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಸ್ಕೀಮ್'ಬಿ' ಯೋಜನೆಯನ್ನು ಅನುಷ್ಠಾನಗೊಳಿಸುವುದು.

(ಆ) ತೆಲಗು ಗಂಗಾ ಯೋಜನೆ (ಮದ್ರಾಸ ಕುಡಿಯುವ ನೀರಿನ ಪೂರೈಕೆಗಾಗಿ ಸಂಬಂಧಪಟ್ಟ ಯೋಜನೆಯನ್ನು ಹೊರತುಪಡಿಸಿ) ಶ್ರೀ ಶೈಲಂ ಎಡದಂಡೆ ಕಾಲುವೆ ಯೋಜನೆ, ಶ್ರೀ ಶೈಲಂ ಬಲದಂಡೆ ಕಾಲುವೆ ಯೋಜನೆ, ಭೀಮ ಏತ ನೀರಾವರಿ ಯೋಜನೆ ಮತ್ತು ಪುಲಿಚಿಂತಲಾ ಡೈವರ್ಷನ್ ಯೋಜನೆ ಮುಂತಾದ ಯೋಜನೆಗಳಿಗೆ ಆಂಧ್ರಪ್ರದೇಶವು ಕೋರಿರುವ ಅನುಮತಿ ಅಥವಾ ಒಪ್ಪಿಗೆಯನ್ನು ನಿರಾಕರಿಸುವುದು : ರದ್ದುಗೊಳಿಸುವುದು.

(ಇ) ಸ್ಕೀಮ್ 'ಬಿ' ಯನ್ನು ಅನುಷ್ಠಾನಗೊಳಿಸುವವರೆಗೆ ಮೇಲ್ಕಂಡ ಯೋಜನೆಗಳ ಕಾಮಗಾರಿಗಳನ್ನು ತತಕ್ಷಣ ನಿಲ್ಲಿಸುವಂತೆ ಆಂಧ್ರಪ್ರದೇಶಕ್ಕೆ ಆದೇಶ ನೀಡುವುದು. ಇದಲ್ಲದೇ ಯೋಜನಾ ಆಯೋಗವು ನೀಡಿರುವ ಒಪ್ಪಿಗೆಯ..... ಅನುಸಾರ ಹಾಗೂ ಕರ್ನಾಟಕ ರಾಜ್ಯದ ಹಕ್ಕಿಗೆ ಒಳಪಟ್ಟಿರುವಂತೆ ರೂಪಿಸಿರುವ ಹಾಗೂ ಕೈಗೊಂಡಿರುವ ಆಲಮಟ್ಟಿ ಅಣೆಕಟ್ಟಿನ ನಿರ್ಮಾಣ ಕಾರ್ಯಕ್ಕೆ ಆಂಧ್ರಪ್ರದೇಶವಾಗಲೀ ಅಥವಾ ಯಾರೇ ಆಗಲಿ ಅಡ ಚಣೆ

ಉಂಟು ಮಾಡುವುದನ್ನು ಈ ಸದನವು ಸಹಿಸುವುದಿಲ್ಲ. ನಿಯೋಜಿಸಿರುವಂತೆ ಕೈಗೊಂಡಿರುವ ಅಲಮಟ್ಟಿ ಅಣೆಕಟ್ಟಿನ ಕಾಮಗಾರಿಗಳನ್ನು ಯಾವುದೇ ಕಾರಣದಿಂದಾಗಿ ಕರ್ನಾಟಕ ಸರ್ಕಾರವು ಸ್ಥಗಿತಗೊಳಿಸಕೂಡದು. ಇದು ಸರ್ವಾನುಮತದ ನಿರ್ಣಯ.

ಶ್ರೀ ವಾಟಾಳ್ ನಾಗರಾಜ್ : ನಿರ್ಣಯ ಮಂಡಿಸಿದ್ದೀರಿ. ಈಗ ಇದರ ಬಗ್ಗೆ ಚರ್ಚೆಯಾಗಿ ಆಮೇಲೆ ತಾನೇ ಅಂಗೀಕರಿಸುವುದು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಏನು? ಏತಕ್ಕೆ ಹೀಗೆ ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸಾರ, ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಇದರ ಬಗ್ಗೆ ಚರ್ಚೆಯಾಗಿ ಆಮೇಲೆ ತಾನೆ ಮತದಾನ ಕೇಳುವುದು.....

SRI. J.H. PATEL : Don't be technical about it. I have taken your consent. I have read it. Mr. Moily has approved it. Mr. Vatal Nagraj has approved it.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಇದರ ಮೇಲೆ ಮಾತನಾಡಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿರ್ಣಯ ಮಂಡಿಸಿದ್ದೀರಿ. ಇದರ ಬಗ್ಗೆ ಚರ್ಚೆ ವಿಧಾನ ಒಂದು. ಆಮೇಲೆ ನಿರ್ಣಯ .....

ಶ್ರೀ ಜೆ.ಹೆಚ್. ಪಟೇಲ್ : ಚರ್ಚೆ ಮಾಡುವಾಗ ನೀವು ನಿರ್ಣಯವನ್ನು ಸರ್ಥನೆ ಮಾಡುತ್ತೀರಿ ಎಂಬುದು ನನಗೆ ಗೊತ್ತು. ಅಥವಾ ಇನ್ನು ಕೆಲವು ವಿಷಯ ತಂದು ಈ ನಿರ್ಣಯದ ಗಾಂಭೀರ್ಯತೆ..... ನಾನು ಮಾನ್ಯ ನಂಜೇಗೌಡರಿಗೆ ಇಷ್ಟೆ ಕೇಳುವುದು. ಮಾತನಾಡಿ, ಮಾತನಾಡುವ ಬಗ್ಗೆ ನನ್ನ ಅಭ್ಯಂತರವಿಲ್ಲ. ಕೆಲವು ವಿಷಯಗಳನ್ನು ಇದಕ್ಕೆ ಅಡಿಷನಲ್ಲಾಗಿ ಹೇಳುವುದಾದರೆ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ನೀವು ನಂಜೇಗೌಡರಿಗೂ ಕೇಳಿ, ದೇವೇಗೌಡರಿಗೂ ಕೇಳಿ, ನಾಗೇಗೌಡರಿಗೂ ಕೇಳಿ, ನಮ್ಮದೇನೂ ಅಭ್ಯಂತರ ಇಲ್ಲ. ನಮ್ಮ ಅಭ್ಯಂತರ ಎಂದರೆ ಈಗ ತಾವು ನಿರ್ಣಯ ಮಂಡಿಸಿದ್ದೀರಿ. ಇದನ್ನು ಎಲ್ಲರೂ ಕುಳಿತೇ ವಿಚಾರ ಮಾಡಿ ಚರ್ಚೆ ಮಾಡಿದ ಮೇಲೆ ಡ್ರಾಫ್ಟ್ ಆಗಿದೆ. ಆದರೆ ಏತಕ್ಕೆ ಈ ಪರಿಸ್ಥಿತಿ ಬಂತು ಎಂಬುವುದನ್ನು ನಾವು ಹೇಳಬೇಕಲ್ಲ. ಸನ್ಮಾಯ ಅಧ್ಯಕ್ಷರೆ, ನಾನು ತಂದಂಥ ನಿಲುವಳಿ ಸುಚನೆ ಏನು? ನಾವು ಏತಕ್ಕೆ ತಂದಿದ್ದೇವೆ? ಆಂಧ್ರಪ್ರದೇಶದಲ್ಲಿ ಅಂದಿನ ಸದನದಲ್ಲಿ ಶ್ರೀಮಾನ್ ಚಂದ್ರಬಾಬು ನಾಯ್ಡು ಅವರು ಒಂದು ನಿರ್ಣಯವನ್ನು.....

ಅಧ್ಯಕ್ಷರು : ಕೆಳಗೆ ಬಾಂಕ್ವೆಟ್ ಹಾಲ್‌ನಲ್ಲಿ 5 ಗಂಟೆಗೆ ಒಂದು ಕಾರ್ಯಕ್ರಮ ಇದೆ. ಅದರಲ್ಲಿ ರಾಷ್ಟ್ರಪತಿಗಳು ಭಾಗವಹಿಸುತ್ತಿದ್ದಾರೆ. ಅದರ ಆಹ್ವಾನಪತ್ರಿಕೆ ನನಗೂ ಬಂದಿಲ್ಲ, ತಮಗೂ ಬಂದಿಲ್ಲ, ಸರಿ. ಆದರೆ ನಾನು ಒಂದು ಜಿಜ್ಞಾಸೆಯಲ್ಲಿದ್ದೇನೆ. ರಾಷ್ಟ್ರಪತಿಗಳು ಬಂದು ಕೆಳಗೆ ಒಂದು ಸಭೆ ನಡೆಸತಕ್ಕ ಸಂದರ್ಭದಲ್ಲಿ, ಅವರು ಭಾಗವಹಿಸತಕ್ಕ ಸಂದರ್ಭದಲ್ಲಿ ನಾವು ಇಲ್ಲಿ ಕುಳಿತು ಸದನ ನಡೆಸುವುದು ಸರಿಯೇ ಎಂಬುದು. ಯಾರಿಗೂ ಇನ್‌ವಿಟೇಷನ್ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಈಗ ಅವರು ನಿರ್ಣಯ ಮಂಡಿಸಿದ್ದಾರೆ. ಚರ್ಚೆ ಆದಮೇಲೆ ಅಡಾಪ್ಟ್ ಮಾಡಿಕೊಳ್ಳಬೇಕು. ಅದಕ್ಕೆ ಯಾರೂ ವಿರೋಧ ಇಲ್ಲ. ಆದರೆ ನೀವು ಅದನ್ನು ಯಥಾಪ್ರಕಾರ ಇಷ್ಟಕ್ಕೇ ಬಿಡಿ ಎಂದರೆ ಸರಿಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಒಂದು ವಿನಮ್ರ.

ಅಧ್ಯಕ್ಷರು : ನಾನು ಹೇಳುವುದನ್ನು ಪೂರ್ತಿ ಕೇಳಿಬಿಡಿ. ನಾನು ಏನು ಹೇಳುತ್ತೇನೆಂದರೆ 5 ಗಂಟೆಗೆ 5 ನಿಮಿಷ ಇರುವವರೆಗೆ ಚರ್ಚೆ ನಡೆಯಲಿ ಎಂಬುದು ನನ್ನ ಅಭಿಪ್ರಾಯ. 5 ನಿಮಿಷ ಮುಂಚಿತವಾಗಿ ನಾವು ಅಡ್ಜರ್ನ್ ಮಾಡೋಣ. ಬೇಕಾದರೆ on Monday, we can continue the discussion, I am not trying to scuttle the discussion on this.

ಶ್ರೀ ವಾಟಾಳ್ ನಾಗರಾಜ್ : ಆಗಬಹುದು.

ಶ್ರೀ ಜೆ.ಹೆಚ್.ಪಟೇಲ್ : ಮಾನ್ಯ ಅಧ್ಯಕ್ಷರೆ, ಇದನ್ನು ಎಲ್ಲರೂ ಸೇರಿ ಬೆಳಗ್ಗೆಯಿಂದ ಕುಳಿತು ಚರ್ಚೆ ಮಾಡಿದ್ದೇವೆ. ಮೊದಲು ಈ ನಿರ್ಣಯವನ್ನು ಅಡಾಪ್ಟ್ ಮಾಡಿಕೊಳ್ಳೋಣ. ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಅವರು ನಾವು ಎಲ್ಲಾ ಕುಳಿತೇ ನಿರ್ಣಯ ಮಾಡಿರುವುದು.

ಶ್ರೀ ಜೆ.ಹೆಚ್. ಪಟೇಲ್ : ಇದೇ ಫಾರಂನಲ್ಲಿ ನಾವೆಲ್ಲಾ ಒಪ್ಪಿರುವ ಹಾಗೆ ಅಡಾಪ್ಟ್ ಮಾಡಿ. ಚರ್ಚೆ ಬೇಕಾದರೆ ಆಮೇಲೆ ಅದರ ಮೇಲೆ ಮಾಡೋಣ. ನನ್ನದೇನೂ ಅಭ್ಯಂತರವಿಲ್ಲ. If we do not adopt the Resolution to-day, there will be a wrong message.

ಅಧ್ಯಕ್ಷರು : ನನ್ನ ಸಮಸ್ಯೆ ಇಷ್ಟೆ. ರಾಷ್ಟ್ರಪತಿಗಳು ಇಲ್ಲಿಗೆ ಬಂದು ಒಂದು ಸಭೆಯಲ್ಲಿ ಭಾಗವಹಿಸುವಾಗ ಅನಂತರವೂ ಕೂಡ ಇಲ್ಲಿ ನಾವು ಸಭೆ ನಡೆಸತಕ್ಕದ್ದು ಔಚಿತ್ಯವೇ ಎಂಬುದು. ಚರ್ಚೆ ಯಾವ ರೂಪದಲ್ಲಿ ಮಾಡಬೇಕು, ಈ ರೆಸಲ್ಯೂಶನ್ ಅಡಾಪ್ಟ್ ಮಾಡಿ ಚರ್ಚೆಯನ್ನು ಸೋಮವಾರ ತೆಗೆದುಕೊಳ್ಳುತ್ತೀರೋ ಅಥವಾ ಚರ್ಚೆಯನ್ನು ಪ್ರಾರಂಭ ಮಾಡಿ ನಿಲ್ಲಿಸುತ್ತೀರೋ ಅದನ್ನು ನಾನು ನಿಮಗೇ ಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಈಗ ನಿರ್ಣಯವನ್ನು ಮಂಡಿಸಿ ಆಗಿದೆ. ಈ ನಿರ್ಣಯವನ್ನು ಮಂಡಿಸಿದಮೇಲೆ ಇದರ ಬಗ್ಗೆ ಅತ್ಯಂತ ಅಮೂಲ್ಯವಾದ ಚರ್ಚೆ ಆಗಬೇಕಾಗಿದೆ. ಸರ್ವಾನುಮತ ಆ ಪ್ರಶ್ನೆ ಬೇರೆ. ಚರ್ಚೆಯಾಗಬೇಕಾಗುತ್ತದೆ. ಅದಕ್ಕೆ ತಮಗೆ ಏನು ಹೇಳುತ್ತೇನೆಂದರೆ, ತಾವು ಹೇಳಿದ ಪ್ರಕಾರ ಇವತ್ತು ಚರ್ಚೆ ಎಷ್ಟು ಹೊತ್ತಿನವರೆಗೆ ನಡೆಸಬೇಕೋ ತಾವು ನಡೆಸಿ. ಅದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಮತ್ತು ಸೋಮವಾರ ತೆಗೆದುಕೊಳ್ಳತಕ್ಕ ತಮ್ಮ ಸಲಹೆ ಎನ್ನದೆ ಅದು ಒಳ್ಳೆಯ ಸಲಹೆ. ಅದರಲ್ಲಿ ಎರಡನೇ ಮಾತಿಲ್ಲ. ಆ ಸಲಹೆಯನ್ನು ನಾವೆಲ್ಲ ಒಪ್ಪುತ್ತೇವೆ. ಆದ್ದರಿಂದ ದಯವಿಟ್ಟು ಆ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಅನ್ನಿಸುತ್ತದೆ. ಅದು ಸೂಕ್ತವಾದ ಸಲಹೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ನಾವು ಹೊಸ ಶಾಸಕರಿದ್ದೇವೆ. ನಮಗೆ ಇದರ ಬಗ್ಗೆ ಮಾಹಿತಿ ಇಲ್ಲ. ಆದರೆ ಬೆಳಗ್ಗಯಿಂದ ಇಷ್ಟರವರೆಗೆ ನಾವು ಹೊಸ ಶಾಸಕರು ಇಲ್ಲಿ ಕುಳಿತುಕೊಂಡು ನಮ್ಮ ಹಿರಿಯರೆಲ್ಲಾ ಒಳಗೆ ಸೇರಿ ಒಂದು ಇತ್ಯರ್ಥಕ್ಕೆ ಬಂದಿದ್ದಾರೆ ಎಂದು ಹೇಳುವಂಥ ವಿಶ್ವಾಸದಲ್ಲಿ ನಾವಿದ್ದೇವೆ. ಇದರಲ್ಲಿ ಚರ್ಚೆಯಾಗಬೇಕು ಅಥವಾ ಆಗಬಾರದು ಎಂಬ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ ಒಂದು ಸ್ಪಷ್ಟ. ಏಕೆಂದರೆ ಬೆಳಗ್ಗೆಯಿಂದ ಇಷ್ಟರವರೆಗೆ ನಮ್ಮ ಹಿರಿಯರು ಅವರ ಮನಸ್ಸಿನ ಎಲ್ಲಾ ಭಾವನೆಗಳನ್ನು ಕ್ರೋಢೀಕೃತ ಮಾಡಿ ತಮ್ಮ ಕಛೇರಿಯಲ್ಲಿ ಇದರ ಬಗ್ಗೆ ಇತ್ಯರ್ಥಕ್ಕೆ ಬರಬೇಕು ಎಂದು ನಿಶ್ಚಯ ಮಾಡಿದ್ದಾರೆ. ಪ್ರಾಯಶಃ ಇದರಲ್ಲಿ ಹೆಚ್ಚಿನ ಚರ್ಚೆಗೆ ನಾವು ಅವಕಾಶಗಳನ್ನು ಕಲ್ಪಿಸುವುದರ ಮುಖಾಂತರ ಏನಾಗುತ್ತದೆಂದರೆ ಕೇವಲ ಚರ್ಚೆಗಾಗಿ ಚರ್ಚೆ ಎಂದು ಆಗುತ್ತದೆಯೇ ಹೊರತು ನಾವೆಲ್ಲಾ ಒಟ್ಟಿಗೆ ಸೇರಿ ಇತ್ಯರ್ಥ ಮಾಡಿದಮೇಲೆ ಪುನಃ ಅದನ್ನು ತುಂಬಾ ಧೀರ್ಘವಾಗಿ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ, ಚರ್ಚೆ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತಿದ್ದೇನೆ. ನನ್ನ ಅಭಿಪ್ರಾಯ ಇಷ್ಟೆ. ನಮ್ಮದು ತಪ್ಪಿರಬಹುದು. ಅಧ್ಯಕ್ಷರೆ, ನಮ್ಮದು ತಪ್ಪಿದರೆ ತಾವು ಕ್ಷಮೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಪ್ರಾಮಾಣಿಕವಾಗಿ ನಮ್ಮ ಹಿಯರ ಮೇಲೆ ಪೂರ್ತಿ ವಿಶ್ವಾಸ ಇಟ್ಟು ಈ ಕೆಲಸಗಳನ್ನು ಮಾಡಿದಮೇಲೆ, ನಾವೆಲ್ಲಾ ಹೊಸ ಶಾಸಕರು ನಮ್ಮೆಲ್ಲ ಸಮಯಗಳನ್ನು ಇಲ್ಲಿ ಸದನದ ಹೊರಗೆ ಕಾದು ಕುಳಿತು ನಾಳೆ ಸೋಮವಾರವಾದರೂ ನಮ್ಮೆಲ್ಲ ವಿಚಾರಗಳನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೂಡಬೇಕೆಂಬ ಹಿನ್ನೆಲೆಯಲ್ಲಿ ಇವತ್ತು ತೀರ್ಮಾನ ಆದರೆ ನಮ್ಮನಮ್ಮ ಕ್ಷೇತ್ರದ ಬಗ್ಗೆ ಸೋಮವಾರವಾದರೂ ಮಾತನಾಡಬಹುದು ಎಂದು ಹೇಳುವಂಥ ಹೆಚ್ಚಿನ ವಿಶ್ವಾಸದಿಂದ ನಾವು ಕಾದು ಕುಳಿತಿದ್ದೇವೆ. ಪುನಃ ಇದರಲ್ಲಿ ಇನ್ನೂ ಚರ್ಚೆ ಮಾಡುವುದು ಎಂದರೆ ಬಹುಶಃ ನನ್ನ ಮನಸ್ಸಿಗೆ ಪಾಸ್ಯಾಸ್ಪದ ಎಂದು ಕಾಣಿಸುತ್ತದೆ. ತಪ್ಪಿದ್ದರೆ ಕ್ಷಮಿಸಬೇಕು.

ಅಡಳಿತ ಪಕ್ಷದ ಸದಸ್ಯರೊಬ್ಬರು : ಅದಕ್ಕೆ ನಮ್ಮೆಲ್ಲರ ಬೆಂಬಲ ಇದೆ. ಸದಾನಂದ ಗೌಡರು ಹೇಳಿದ್ದಕ್ಕೆ ಸರ್ವಸದಸ್ಯರ ಬೆಂಬಲ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಅವರ ಅಭಿಪ್ರಾಯ. ನಾವೇನೂ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಎಲ್ಲಾ ಹೊಸ ಶಾಸಕರ ಭಾವನೆಗಳನ್ನು ತಮ್ಮ ಮಾತುಗಳಲ್ಲಿ ಸದಾನಂದ ಗೌಡರು ತಿಳಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸದನದಲ್ಲಿ ಹೊಸ ಶಾಸಕರು ಹಳೇ ಶಾಸಕರು ಎಂದೇನೂ ಇಲ್ಲ. ಎಲ್ಲರಿಗೂ ಸಮಾನವಾದ ಹಕ್ಕಿದೆ. ಹೊಸ ಶಾಸಕರು ಹಳೇ ಶಾಸಕರಿಗಿಂತ ಮುಂದೆ ಹೋಗಬಹುದು. ಅನೇಕ ಜನ ಮುಂದೆ ಹೋಗಿದ್ದಾರೆ. ಅದಕ್ಕೆ ಇಲ್ಲೇನೂ ಕಡಿವಾಣ ಇಲ್ಲ. ಆದರೆ ನಮ್ಮದೇನೆಂದರೆ ಇವತ್ತು ನಾವೆಲ್ಲಾ ಕೂಡಿ ಸಹಕಾರ ಕೊಟ್ಟಿದ್ದೇಕೆ ? ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲಾ ಕೂಡಿ ಕುಳಿತು ಅವರು ಸಮಯ ತಕ್ಷಣವೇ ಶ್ರೀಮಾನ್ ನಂಜೇಗೌಡರು ಸಲಹೆ ಮಾಡಿದ ತಕ್ಷಣವೇ ನಾವು [illegible]

ದೃಷ್ಟಿಯಿಂದ ನಾವು ತಕ್ಷಣ ಒಪ್ಪಿಕೊಂಡೆವು. ಇಲ್ಲದೇ ಇದ್ದರೆ ಮೊದಲು ಚರ್ಚೆ ಮಾಡಿ ಆಮೇಲೆ ರೆಸಲ್ಯೂಷನ್‌ಗೆ ಹೋಗುತ್ತಿದ್ದೆವು. ಆ ಮಾತು ಆಗಲೇ ಹೇಳುವುದಕ್ಕೆ ನಮಗೂ ಕೂಡ ಬುರುತ್ತಿತ್ತು. ಆದರೆ ಸದಸದಲ್ಲಿ ಒಬ್ಬರು ಗೌರವಾನ್ವಿತ ಸದಸ್ಯರು ಯಾರಾದರೂ ಹೇಳಿದಮೇಲೆ ಅದಕ್ಕೆ ಮಹತ್ವಕೊಡಬೇಕಾಗುತ್ತದೆ. ಆದರೆ ಚರ್ಚೆ ಇಲ್ಲದೆ ಯಾವುದೂ ರೆಸಲ್ಯೂಷನ್ ಅಡಾಪ್ಟ್ ಆಗುವುದಿಲ್ಲ. ರಾತ್ರಿ 12 ಗಂಟೆಯಾದರೂ ಕುಳಿತುಕೊಳ್ಳೋಣ. ಅಧ್ಯಕ್ಷರೆ, ಇವತ್ತೇ ಅಡಾಪ್ಟ್ ಮಾಡಬೇಕಾದರೆ ರಾತ್ರಿ 12 ಗಂಟೆಯಾದರೂ ನಾವು ತಯಾರಿದ್ದೇವೆ. ಬೇಕಾದರೆ ಒಂದು ತಾಸು ಅವರು ಹೋಗಿ ಬರಲಿ. 6 ಗಂಟೆಗೆ ಸೇರೋಣ ಎಂದರೆ ಪುನಃ 6 ಗಂಟೆಗೆ ಸೇರಿ ಚರ್ಚೆ ಮಾಡೋಣ.

ಶ್ರೀ ಎಚ್. ಎನ್. ನಾಗೇಗೌಡ : ನನಗೆ ಸ್ವಲ್ಪ ಅವಕಾಶ ಕೊಡುತ್ತೀರೋ?

ಶ್ರೀ ವಾಟಾಳ್ ನಾಗರಾಜ್ : ನಾನಲ್ಲ ಅವಕಾಶ ಕೊಡುವುದು. ನನಗೆ ಇಲ್ಲಿ ತೇಜೋವಧೆ ಮಾಡುವುದಕ್ಕೆ ಹೋಗಬೇಡಿ. ನನಗೆ ಅವಕಾಶ ಕೊಡುತ್ತೀರಾ ಎಂದು ನೀವು ನನ್ನನ್ನು ಕೇಳಿದರೆ ಹೇಗೆ? ಅಧ್ಯಕ್ಷರನ್ನು ಕೇಳಬೇಕು. ನೀವು ನನ್ನನ್ನು ಏನು ಕೇಳುತ್ತೀರಿ? ಅವಕಾಶ ಕೊಡುವವರು ಅವರು. ಅವರನ್ನು ಕೇಳಿ. ನಾನು ನಿಂತಿದ್ದೇನೆ. ಅವರು ಕುಳಿತುಕೋ ಅಂದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಚ್.ಎನ್. ನಂಜೇಗೌಡ : ಆಯಿತು. ಅವರು ಕರೆದಾಗ ಹೇಳುತ್ತೇನೆ.

ಅಧ್ಯಕ್ಷರು : ಇಬ್ಬರಲ್ಲಿ ಒಬ್ಬರು ಹೇಳಿ. ಇಬ್ಬರೂ ಕುಳಿತರೆ ಹೇಗೆ? ಎದ್ದರೆ ಇಬ್ಬರೂ ಏಳುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಲ್ಲರೂ ಒಪ್ಪಿ ಇದನ್ನು ಮಂಡಿಸಿರತಕ್ಕದ್ದು. ಇಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ಅದರ ಬಗ್ಗೆ ಚರ್ಚೆ ಇಲ್ಲ. ಅದನ್ನು ಒಪ್ಪಿಯೇ ಮಾಡಿರತಕ್ಕದ್ದು. ಮತ್ತೆ ಬೇರೆ ವಿಷಯ ಬೇಕಾದರೆ ಚರ್ಚೆ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ಚರ್ಚೆ ಇಲ್ಲದೆ ನಿರ್ಣಯ ಮಾಡುತ್ತೇವೆಂದು ಒಪ್ಪಿಲ್ಲ, ಚರ್ಚೆಯಾಗಬೇಕು ಎಂಬುದಾಗಿ ತೀರ್ಮಾನವಾಗಿತ್ತು.

+ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ಈಗ ಈ ನಿಲುವಳಿ ಸೂಚನೆ ಬಂದ ಕೂಡಲೇ, ಇಲ್ಲಿ ನಾವು ಬೆಳಗ್ಗೆ ತೀರ್ಮಾನ ತೆಗೆದುಕೊಂಡು ಸರಿಯಾದಂಥ ನಿರ್ಣಯ ತರೋಣ, ಏಕ ಎಂದು ಹೇಳಿದರೆ, ಕೃಷ್ಣಾನದಿ ನೀರಿನ ವಿಷಯ ಇರಬಹುದು, ಅಥವಾ ಗಡಿ ವಿಷಯ ಇರಬಹುದು ಅಥವಾ ಕಾವೇರಿ ಜಲಾನಯನ ವಿಷಯ ಇರಬಹುದು, ಇದರ ಬಗ್ಗೆ ಮೊದಲಿನಿಂದಲೂ ಕೂಡ ಈ ಸದನದ ಒಂದು ಸತ್‌ಪರಂಪರೆ ಎಂದು ಹೇಳಿದರೆ ದೇಶದ ಜನರ ದೃಷ್ಟಿಯಲ್ಲಿ ಒಮ್ಮತದ ನಿರ್ಣಯ, ಒಂದೇ ಮಾತು ಇರಬೇಕು, ಒಂದೇ ಧ್ವನಿ ಇರಬೇಕು. ಇದರಲ್ಲಿ ಯಾವುದೇ ರೀತಿಯಾದಂಥ ಅಪಸ್ವರ ಬರಬಾರದು. ವಿಚಾರ ಭೇದ ವೈಯಕ್ತಿಕವಾಗಿ ಇರಬಹುದು, ಅಥವಾ ಪಕ್ಷದ ಪರವಾಗಿ ಕೂಡ ಅಭಿಪ್ರಾಯ ಭೇದ ಇರಬಹುದು. ಆದರೆ ಇಂತಹ ಒಂದು ಜ್ವಲಂತವಾದಂಥ ಸಮಸ್ಯೆ ಬರುವಾಗ ನಾವು ವೈಕ್ತಿಕ ವ್ಯಕ್ತಿಯಂತ, ಒಂದೇ ಧ್ವನಿಯಿಂದ ನಾವು ಮಾತನಾಡಬೇಕೆಂದು ಹೇಳಿ ನಿರ್ಣಯವನ್ನು ಮಾಡಬೇಕೆಂಬ ವಿಚಾರ ಇದು ಹೊಸದು ಅಲ್ಲ. ನಾವು ಹಿಂದಿನಿಂದಲೂ ಎಷ್ಟೋ ಸಾರಿ

ಭಿನ್ನಾಭಿಪ್ರಾಯ, ಎಷ್ಟೇ ಸಂಘರ್ಷಣೆ ಬಂದರೂ ಕೂಡ ಇದನ್ನು ನಡೆಸಿಕೊಂಡು ಬಂದಿದ್ದೇವೆ. ಅದೇ ಪರಂಪರೆಗೆ ಅನುಗುಣವಾಗಿ ಇವತ್ತು ಈ ಸದನದ ಮುಖ್ಯವಾಗಿ ಫ್ಲೋರ್ ಲೀಡರ್ಸ್‌ನ್ನು, ಮಾನ್ಯ ಮುಖ್ಯ ಮಂತ್ರಿಯವರು ಅವರ ಸಚಿವಸಂಪುಟ ಸದಸ್ಯರು, ತಜ್ಞರುಗಳು, ಅಧಿಕಾರಿಗಳು ಅವರ ಜೊತೆಯಲ್ಲಿ ಮಾತನಾಡಿಯಾದಮೇಲೆ ಈ ನಿರ್ಣಯವನ್ನು ಇವತ್ತು ಮಾನ್ಯ ಸಭಾನಾಯಕರು ಇಲ್ಲಿ ಮಂಡಿಸಿದ್ದಾರೆ. ಈ ನಿರ್ಣಯದ ಬಗ್ಗೆ ಯಾರದ್ದೂ ಅಭಿಪ್ರಾಯ ಭೇದ ಇಲ್ಲ. ಇದು ಒಮ್ಮತದಿಂದ ತಯಾರು ಮಾಡಿದಂಥ ಕರಡು ನಿರ್ಣಯ. ಅಧ್ಯಕ್ಷರು ಈ ಸದನ ಇದಕ್ಕೆ ಒಪ್ಪಿಗೆ ಕೊಟ್ಟರೆ ಮಂಜೂರು ಮಾಡುತ್ತಾರೆ. ಇದರ ಬಗ್ಗೆ ಏನಾಗಿದೆ ಎಂದರೆ ಸ್ವಲ್ಪ ಶಬ್ದದಲ್ಲಿ ವ್ಯತ್ಯಾಸವಾಗಿದೆ ಚರ್ಚೆ ಬಗ್ಗೆ. ಚರ್ಚೆ ಅಂದರೆ ಇದು ಮುಖ್ಯವಾಗಿ ಬಹಳ ಒಂದು ಮಹತ್ವದ ವಿಚಾರ. ಈ ನಿರ್ಣಯದ ಬಗ್ಗೆ ಬಹುಶಃ ನನ್ನ ವೈಯಕ್ತಿಕವಾದಂಥ ಅಭಿಪ್ರಾಯ ಏನೆಂದರೆ ಇದನ್ನು ಇವತ್ತೇ ಮಂಜೂರು ಮಾಡಿದರೆ ಇದರ ಘನತೆ, ಪಾವಿತ್ರ್ಯತೆ ಉಳಿಯುತ್ತದೆ. ನನ್ನ ಲೆಕ್ಕದಲ್ಲಿ ಇದು ಇವತ್ತೇ ಆಗಬೇಕು. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಬೇರೆ ಬೇರೆ ಎಲ್ಲ ಅಂಶಗಳನ್ನು ನಿರ್ಣಯದಲ್ಲಿ ಹಾಕಲಿಕ್ಕೆ ಬರುವುದಿಲ್ಲ. ನಿರ್ಣಯದ ಬಗ್ಗೆ ಒಂದು ಒಮ್ಮತಕ್ಕೆ ಬರಬೇಕಾಗುತ್ತದೆ. ಅದರಲ್ಲಿ ಅಭಿಪ್ರಾಯ ಭೇದ ಬಂದರೂಕೂಡ ಕೊನೆಗೆ ಚರ್ಚೆಮಾಡಿ ಒಂದು ಸಾಮಾನ್ಯವಾಗಿ ಒಪ್ಪಿಕೊಳ್ಳತಕ್ಕಂಥ ಅಂಶಗಳನ್ನು ಈ ನಿರ್ಣಯ ಒಳಗೊಂಡಿರುತ್ತದೆ. ಅದರೆ ಕೆಲವು ಸಾಧಕಬಾಧಕಗಳು ನಿರ್ಣಯದ ಬಗ್ಗೆ ಅಲ್ಲ. ಈ ವಿಚಾರದ ಬಗ್ಗೆ ಇರುತ್ತವೆ. ಯಾವುದರಿಂದ ಈ ವಿಚಾರ ಉದ್ಭವವಾಗಿದೆ, ಅದರ ಸಾಧಕಬಾಧಕಗಳು, ಮುಂದೆ ಬರತಕ್ಕಂಥ ಅನಾಹುತಗಳು ಮತ್ತು ಇನ್ನು ಮುಂದೆ ಇಂತಹ ವಿಚಾರಗಳು ಬಂದಾಗ ಸರ್ಕಾರ ಅಥವಾ ನಾವು ಯಾವ ರೀತಿ ಎಚ್ಚರವಹಿಸಿಕೊಳ್ಳಬೇಕು, ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಚರ್ಚೆ ನಿರ್ಣಯ ಬಗ್ಗೆ ಎಂದು ತಿಳಿದುಕೊಳ್ಳತಕ್ಕದ್ದು ಏನಿದೆ ಅದು ನಾವು ಬಹುಶಃ ಸರಿಯಾಗಿ ಗ್ರಹಿಸಿ ಹೇಳಿಲ್ಲ. ಅದ್ದರಿಂದ ಇಂತಹ ವಿಚಾರಗಳು ಇನ್ನು ಮುಂದೆ ನಡೆಯಬಾರದು. ಇದರಲ್ಲಿ ಎಲ್ಲಿ ನಾವು ಎಡವಿದ್ದೇವೆ, ಎಲ್ಲಿ ನಾವು ತಪ್ಪಿದ್ದೇವೆ, ಯಾವ ರೀತಿಯಲ್ಲಿ ನಾವು ಮುಂದುವರೆಸಿಕೊಂಡು ಹೋಗಬೇಕು ಎಂಬ ವಿಚಾರಗಳು ನಿಜವಾಗಿಯೂ ಚರ್ಚೆಗೆ ಗ್ರಾಸವಾಗುತ್ತವೆ. ಬಹುಶಃ ಅದು ಸದನದಲ್ಲಿ ಚರ್ಚೆಯಾಗಬೇಕಾಗುತ್ತದೆ; ಜನತೆ ನೋಡಬೇಕಾಗುತ್ತದೆ. ಏಕೆಂದರೆ ನಮ್ಮಲ್ಲಿ ಮಾತುಕತೆ ಏನಾಯಿತು ಅದು ಸಾರ್ವಜನಿಕರಿಗೆ ಗೊತ್ತಾಗುವುದಿಲ್ಲ. ಅನೇಕ ಸದಸ್ಯರಿಗೆ ಕೂಡ ಇವತ್ತು ಗೊತ್ತಾಗುವುದಿಲ್ಲ. ಇದರ ಹಿನ್ನೆಲೆ ಏನಾಗಿದೆ, ಸಾಧಕಬಾಧಕಗಳು ಏನಾಗಿದೆ, ಅದು ಮುಂದೆ ಏನು ಪರಿಣಾಮವಾಗುತ್ತದೆ ಎನ್ನುವುದು. ತಾವು ಬಾಕಿ ವಿಚಾರಗಳನ್ನು ಕೂಡ ಗ್ರಹಿಸತಕ್ಕಂಥಾದ್ದನ್ನು ಹೊಸ ಸದಸ್ಯರು ಕಲಿಯಬೇಕು. ಅದು ಕಲಿಯದಿದ್ದರೆ ಬಹಳ ಕಷ್ಟವಾಗುತ್ತದೆ. ಇದರ ಹಿನ್ನಲೆಯಲ್ಲಿ ಯಾವುದು ಮಹತ್ವದ ವಿಚಾರಗಳು ಇವೆ, ಅವು ನಿಮಗೆ ಗೊತ್ತಿಲ್ಲ ಅದು ನಮಗೆ ಗೊತ್ತಿದೆ. ಅದ್ದರಿಂದ ಇವತ್ತು ಬಂದಕೂಡಲೇ, ಇಷ್ಟೇ ಇರುವಂಥಾದ್ದು, ಇದರ ಹಿನ್ನಲೆಯಲ್ಲಿ ವಿಚಾರವೇ ಇಲ್ಲ ಎಂದು ತಿಳಿದುಕೊಳ್ಳುವುದು ಸರಿಯಲ್ಲ. ಅದ್ದರಿಂದ ಮಾನ್ಯ ಸದಾನಂದಗೌಡರು ಸ್ವಲ್ಪ ತಾಳ್ಮೆಯಿಂದ ವಿಚಾರಗಳನ್ನು ಕೇಳಬೇಕು.

ಶ್ರೀ ಎಂ. ಶ್ರೀನಿವಾಸ್ : ನೀವು ಚರ್ಚೆಮಾಡಿ, ನಾವು ಅಡ್ಡ ಬರುತ್ತಿಲ್ಲ. ಸದಾನಂದಗೌಡರು ಹೇಳಿರತಕಂಥ ಮಾತೇನೆಂದರೆ, ಬೆಳಿಗೆಯಿಂದ ತೀರ್ಮಾನ ಮಾಡಿದ್ದೀರಿ. ಅದರ ಬಗ್ಗೆ .....

ಶ್ರೀ ಎಂ. ವೀರಪ್ಪ ಮೊಯಿಲಿ : ಶ್ರೀನಿವಾಸರವರೇ ಕೇಳಿ .....

ಶ್ರೀ ಎಂ. ಶ್ರೀನಿವಾಸ್ : ಇದರ ಬಗ್ಗೆ ಚರ್ಚೆ ಮಾಡಿದರೆ ಎರಡು ದಿವಸ ಅದೇ ಆಗುತ್ತದೆ. ಆದ್ದರಿಂದ ಚರ್ಚೆ ಏಕೆ ಎಂಬ ಮಾತನ್ನು ಅವರು ಹೇಳಿದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ : ಎರಡು ದಿವಸ ಅಲ್ಲ, ನಾವು ಬೇಕಾದರೆ ಒಂದೇ ನಿಮಿಷದಲ್ಲಿ ಮುಗಿಸಬಹುದು. ಮಾನ್ಯ ಸದಾನಂದಗೌಡರು ನನಗೆ ಗೊತ್ತಿದ್ದಾರೆ, ಅವರು ನಮ್ಮ ಜಿಲ್ಲೆಯವರು. ಆದ್ದರಿಂದ ಅವರ ಮಾತಿನ ಬಗ್ಗೆ ಅವರ ವಿಚಾರದ ಹಿನ್ನಲೆಯಲ್ಲಿರತಕ್ಕಂಥ ಅರ್ಥದ ಬಗ್ಗೆ ನನಗೆ ಸದ್ಭಾವನೆ ಇದೆ. ಆ ಸದ್ಭಾವನೆಯನ್ನು ನಾನು ವ್ಯಕ್ತಮಾಡುತ್ತೇನೆ, ನಿರ್ಣಯ ಚರ್ಚೆಗೆ ಇಲ್ಲ ಆದ್ದಿರಿಂದ ಇವತ್ತು ನಮ್ಮನಾಯಕರು ನಿರ್ಣಯವನ್ನು ಮಂಡನೆ ಮಾಡಬೇಕು ಎಂಬುದು ನನ್ನ ಸೂಚನೆ. ಮಂಡನೆ ಮಾಡಿ ಆಮೇಲೆ ಇವತ್ತೇ ಇದನ್ನು ಸ್ವೀಕಾರ ಮಾಡಿದರೆ ಅದರ ಮಹತ್ವ ಉಳಿಯುತ್ತದೆ. ಇಲ್ಲದಿದ್ದರೆ ಅದರ ಮಹತ್ವ ಉಳಿಯುವುದಿಲ್ಲ. ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಕೆಲವು ವಿಚಾರದಲ್ಲಿ ಇವತ್ತು ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಅದನ್ನು ಬೇಕಾದರೆ ಸೋಮವಾರ ಕೂಡ ಮುಂದುವರೆಸಬಹುದು. ಆದರೆ ನಿರ್ಣಯ ಇವತ್ತು ಸ್ವೀಕಾರ ಆಗುವುದು ಒಳ್ಳೆಯದು.

ಶ್ರೀ ಅರಗ ಜ್ಞಾನೇಂದ್ರ : ಈಗ ಮಾನ್ಯ ಸದಾನಂದಗೌಡರು ಹೇಳಿದರು. ಹಿಂದೆ ಕುಳಿತ ಸದಸ್ಯರು ಮಾರಿದ್ದೇವೆ, ಪಕ್ಷಪಂಗಡಕ್ಕಿಂತ ಇಲ್ಲಿ ಏನಾಗಿದೆ ಎಂದರೆ ಇಂತಹ ವಿಚಾರಗಳು ಚರ್ಚೆಗೆ ಬಂದಾಗ ಇಲ್ಲಿ ಒಂದು ತರಹ ನಮಗೆ ಏನೂ ಗೊತ್ತಾಗದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಾವು 11.30 ಗಂಟೆಗೆ ಸಭೆಯನ್ನು ಮುಂದೂಡಿದ್ದೇವೆ.....

ಅಧ್ಯಕ್ಷರು : 11.20ಕ್ಕೆ.

ಶ್ರೀ ಅರಗ ಜ್ಞಾನೇಂದ್ರ : ಮತ್ತೆ2 ಗಂಟೆಗೆ ಸೇರಬೇಕೆಂದು ಹೇಳಿ ಸಭೆಯನ್ನು ಮುಂದೂಡಲಾಗಿದೆ. ನಮಗೆ ಗೊತ್ತಿತ್ತು ಇವತ್ತು ರಾಷ್ಟ್ರಪತಿಯವರು ಬರುತ್ತಾರೆ, ಕಾರ್ಯಕ್ರಮ ಇದೆ ಎಂದು. ಚರ್ಚೆ ಇವತ್ತು ಹೆಚ್ಚು ಅವಕಾಶ, ಜಾಸ್ತಿ ಹೊತ್ತು ಸಿಕ್ಕಿದ್ದರೆ ಆಗುತ್ತಿತ್ತು. ನಾವು ಬೆಳಿಗ್ಗೆಯಿಂದ ಕಾದೆವು, ಕಾದೆವು. ಆದರೆ ಏನೂ ಇಲ್ಲ. ಬಹುಶಃ ಆಕ್ರೋಶಭರಿತರಾಗಿ ಸದಾನಂದಗೌಡರು ಈ ಮಾತನ್ನು ಹೇಳಿದ್ದಾರೆ. ಇದು ನಮ್ಮ ಭಾವನೆ ಹೇಗೆ ವ್ಯಕ್ತ ಮಾಡಬೇಕು ಎನ್ನುವುದು ಬಹಳ ಕಷ್ಟವಾಗುತ್ತದೆ. ಇದರಿಂದ ಎಲ್ಲ ಸದಸ್ಯರಿಗೆ ಒಂದೆ ಸಾರಿ ಚರ್ಚೆಗೆ ಅವಕಾಶ ಆಗುತ್ತದೆ. ಬಹಳಷ್ಟು ಜನ ಪ್ರಿಪೇರ್ ಆಗಿದ್ದಾರೆ. ಈ ಭಾಗದಿಂದ ಅಂದರೆ ಕೃಷ್ಣಾ ಬೇಸಿನ್‌ನಿಂದ ಬಂದಿರತಕ್ಕಂಥ ಬಸವನಗೌಡರು, ಎಲ್ಲರೂ ಕೂಡ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಈಗ ಐದೂವರೆ ಗಂಟೆಗೆ ಕ್ಲೋಸ್ ಆಗಿಬಿಟ್ಟರೆ ನಮ್ಮೆಲ್ಲರ ಬಾಯಿ ಕಟ್ಟಿದಹಾಗೆ ಆಗುತ್ತದೆ. ಮತ್ತು ಸರ್ಕಾರಕ್ಕೆ ನಾವು ಏನು ಹೇಳಬೇಕಿತ್ತು, ಅದನ್ನು ಹೇಳುವುದಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ. ಈ ಸರ್ಕಾರ ನಮ್ಮೆಲ್ಲರನ್ನೂ ಕತ್ತಲೆಯಲ್ಲಿಟ್ಟು ಅವಮಾನಕರವಾಗಿರತಕ್ಕಂಥ ಪರಿಸ್ಥಿತಿಗೆ ತಂದಿದೆ.

ಅಧ್ಯಕ್ಷರು : ಈಗ ಟೈಮ್ ಆಗಿಹೋಗುತ್ತಿದೆ.

ಶ್ರೀ ಆರಗ ಜ್ಞಾನೇಂದ್ರ : ಈ ಒಂದು ಕೆಟ್ಟ ಪರಿಸ್ಥಿತಿ ಸದನದಲ್ಲಿ ನಿರ್ಮಾಣವಾಗಿದೆ, ಎಂದು ನನ್ನ ಅನಿಸಿಕೆ. ಇದು ಆಗಬಾರದಾಗಿತ್ತು.

ಅಧ್ಯಕ್ಷರು : ಸಮಯ ನಾಲ್ಕುಮುಕ್ಕಾಲು ಆಗುತ್ತಿದೆ. ಈಗ ನನ್ನ ಸಮಸ್ಯೆಗೆ ಪರಿಹಾರ ಹುಡುಕಬೇಕಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಯಾವುದೇ ಆಕ್ರೋಶ ನನ್ನ ಮನಸ್ಸಿನಲ್ಲಿ ಇಲ್ಲ.

ಅಧ್ಯಕ್ಷರು : ಇಲ್ಲ, ಗೊತ್ತಪ್ಪ ನನಗೆ.

ಶ್ರೀ ಡಿ.ವಿ. ಸದಾನಂದಗೌಡ : ನಮ್ಮ ಅಭಿಪ್ರಾಯ ಏನೆಂದರೆ ಒಂದು ರೆಸಲ್ಯೂಶನ್ ಮಂಡನೆಯಾದಮೇಲೆ ಚರ್ಚೆ ಆಗುವುದಕ್ಕಿಂತ , ಚರ್ಚೆ ಮಾಡುವುದಕ್ಕೆ ಮೊದಲೇ.....

ಅಧ್ಯಕ್ಷರು : ಮಾನ್ಯ ವೀರಪ್ಪ ಮೊಯಿಲಿಯವರು ಅದಕ್ಕೆ ವಿವರಣೆ ಕೊಟ್ಟರು.

ಶ್ರೀ ಡಿ.ವಿ. ಸದಾನಂದಗೌಡ : ಮೊಯಿಲಿಯವರು ಹೇಳಿದ್ದಕ್ಕೆ ನನ್ನ ಪೂರ್ಣ ಸಹಮತ ಇದೆ. ಅದರ ಬಗ್ಗೆ ಖಂಡಿತ ಎರಡು ಮಾತಿಲ್ಲ. ಖಂಡಿತವಾಗಿಯೂ ಮಾನ್ಯ ಮೊಯಿಲಿಯವರು ಏನು ಹೇಳಿದ್ದಾರೆ, ಅದನ್ನು ನಾನು ಅನುಮೋದಿಸುತ್ತೇನೆ ಎಂದು ಹೇಳುತ್ತೇನೆ.

ಅಧ್ಯಕ್ಷರು : ನಮ್ಮ ಸಮಸ್ಯೆ ಏನು ಎಂದರೆ, ದಯವಿಟ್ಟು ಒಂದು ನಿಮಿಷ ಕೇಳಿ. ಐದು ಗಂಟೆಗೆ ಮಾನ್ಯ ರಾಷ್ಟ್ರಪತಿಯವರು ಅಲ್ಲಿಗೆ ಬಂದು ಬಿಡುತ್ತಾರೆ. ಈಗ ಮಾನ್ಯ ವೀರಪ್ಪ ಮೊಯಿಲಿಯವರು, ಖರ್ಗೆಯವರು, ಸಭಾನಾಯಕರು ಎಲ್ಲರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಐದು ಗಂಟೆಗೆ ಮಾನ್ಯ ರಾಷ್ಟ್ರಪತಿಯವರು ಬರುವುದು ಇರುವುದರಿಂದ, ತಾವು ಹೇಳಿರುವಂತೆ ಈಗ ಮೊದಲು ರೆಸಲ್ಯೂಶನ್ ಪಾಸ್ ಮಾಡಿ ಅವರ ಕಾರ್ಯಕ್ರಮ ಮುಗಿದುಹೋದಮೇಲೆ ಬೇಕಾದರೆ ಮತ್ತೆ ಸಭೆಯನ್ನು ಕನ್ವೀನ್ಸ್ ಮಾಡಿ ಚರ್ಚೆಯನ್ನು ಮುಂದುವರಿಸವುದೇ ಅಥವಾ ರೆಸಲ್ಯೂಶನ್ ಪಾಸ್ ಮಾಡಿ ಚರ್ಚೆಯನ್ನು ಸೋಮವಾರ ಕೈಗೆತ್ತಿಕೊಳ್ಳುವುದೇ? ಅಥವಾ ಮಾನ್ಯ ರಾಷ್ಟ್ರಪತಿಗಳು ಬಂದು ಅವರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿ, ನಾವು ಮುಂದುವರೆಸಿಕೊಂಡು ಹೋಗುವುದು ಎಂದು ಹೇಳುವುದಾ? You should guide me. ನಾನು ಏನು ತೀರ್ಮಾನ ತೆಗೆದುಕೊಳ್ಳಲಿ ಹೇಳಿ. ಈ ತರಹ ಸನ್ನಿವೇಶದಲ್ಲಿ ನಾನೆಂದೂ ಸಿಕ್ಕಿರಲಿಲ್ಲ. ನನಗೂ ಕೂಡ ಇದು ಜಿಜ್ಞಾಸೆ ಉಂಟುಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಅನೇಕ ಸಲ ನಾವು ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಕಾವೇರಿ ಇಶ್ಯು ಮೇಲೆ ಯೂನಾನಿಮಸ್ ರೆಸಲ್ಯೂಶನ್ ಪಾಸ್ ಮಾಡಿದೆ. ರೆಸಲ್ಯೂಶನ್ ಒಪ್ಪಿಕೊಂಡರೂ ಕೂಡ ಅದರ ಮೇಲೆ ಒಬ್ಬೊಬ್ಬರು ಎರಡು-ಎರಡು ತಾಸು ಮಾತನಾಡಿದ್ದಾರೆ.

ಅಧ್ಯಕ್ಷರು : ಖರ್ಗೆಯವರೇ...

ಶ್ರೀ ಜಿ.ವಿ. ಶಿವಕುಮಾರ್ : ಇದು ಯಾವ ಸನ್ನಿವೇಶ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವ ಸನ್ನಿವೇಶ ಎಂದು ಕೇಳುತ್ತೀರೋ ? ನೀವು ಮಾಡಿದ್ದು ಇದು. ನಿಮ್ಮ ಪಾಪದ ಕೂಸು ಇದು.

(ಗೊಂದಲ. ಅನೇಕ ಮಾನ್ಯ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, at least, the Chair is not of the opinion that there should be no discussion. ಮಾನ್ಯ ಮೊಯಿಲಿಯವರು ಬಹಳ ಕರೆಕ್ಟ್ ಆಗಿ ಎಕ್ಸ್‌ಪ್ಲೇನ್ ಮಾಡಿದ್ದಾರೆ. My difficulty is only this. How do we go about this?

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಮೊಯಲಿಯವರು ಹೇಳಿದ್ದುದು ನನಗೆ ಅರ್ಥ ಆಗಲಿಲ್ಲ. ಏಕೆಂದರೆ ಅವರು ಏನು ಹೇಳಿದರು ಎಂದರೆ, ರೆಸಲ್ಯೂಶನ್ ಪಾಸ್ ಮಾಡಬೇಕು. ಚರ್ಚೆಯನ್ನೂ ಮಾಡಬಹುದು ಎಂದು ಹೇಳಿದ್ದರು. ಟೈಮ್ ಯಾವಾಗ ಕೊಡುತ್ತೀರಿ? ಇದು ಈಗ ಇರುವ ಪ್ರಶ್ನೆ.

ಅಧ್ಯಕ್ಷರು : ದಯಮಾಡಿ ಕೇಳಿ. ನಾನು ನನ್ನ ಕೊಠಡಿಯಲ್ಲಿ ಕುಳಿತಿರಬೇಕಾದರೆ ಮಾನ್ಯ ಸದಸ್ಯರಾದ ನಂಜೇಗೌಡರು, ವಾಟಾಳ್ ನಾಗರಾಜ್ ಅವರು ಬಂದು ಬೆಲ್ ಹಾಕಿಸಿ, ಮುಖ್ಯಮಂತ್ರಿಗಳು ಒಳಗೆ ಬಂದು ಕುಳಿತುಕೊಂಡಿದ್ದಾರೆ, ಹೋಗೋಣ, ಲೇಟಾಗುತ್ತದೆ ಎಂದು ಹೇಳಿದರು. ಸರಿ, ನೀವು ರೆಡಿ ಇದ್ದರೆ, ನನ್ನದೇನಿಲ್ಲಪ್ಪ ಎಂದು ನಾನು ಬೆಲ್ ಹಾಕಿಸಿ ಸೀದಾ ಒಳಗೆ ಬಂದೆ. We did not discuss about this situation. ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುವುದು. ನೀವು ಹೇಗಾದರೂ ತೀರ್ಮಾನ ತೆಗೆದುಕೊಳ್ಳಿ. Supposing if you say, ಈ ರೆಸಲ್ಯೂಶನ್ ಪಾಸ್ ಮಾಡೋಣ.....

ಶ್ರೀ ವಾಟಾಳ್ ನಾಗರಾಜ್ : ನನ್ನದೊಂದು ಮನವಿ. ಈಗ ನಿರ್ಣಯವನ್ನು ಮಾಡಿದಾಕ್ಷಣಕ್ಕೆ ಅದಕ್ಕೆ ಭಾರಿ ಶಕ್ತಿ ಬರುತ್ತದೆ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಈಗಾಗಲೇ ಆಂಧ್ರ ಅಸೆಂಬ್ಲಿಯಲ್ಲಿ ಚರ್ಚೆಯಾಗಿದೆ. ಅಲ್ಲಿ ನಿರ್ಣಯವಾಗಿ ಎರಡು ದಿವಸ ಆಗಿದೆ. ಮೂರನೆಯ ದಿವಸಕ್ಕೆ ನಾವು ಇಲ್ಲಿ ತರುತ್ತಿದ್ದೇವೆ. ಅರ್ಧಗಂಟೆಯಲ್ಲಿ ಏನೂ ಹೆಚ್ಚುಕಡಿಮೆ ಆಗುವುದಿಲ್ಲ. ಸರ್ಕಾರ ನಿರ್ಣಯ ಏನು ಎಂದು ಮಂಡಿಸಿದ್ದಾರೆ, ಅವರು ಮಂಡಿಸಿರತಕ್ಕದ್ದು ಪತ್ರಿಕೆಯಲ್ಲಿ ಬರುತ್ತದೆ, ದೇಶಕ್ಕೆ ಎಲ್ಲಾ ಗೊತ್ತಾಗುತ್ತದೆ. ಆದರೆ ಸೋಮವಾರ ಸಮಗ್ರವಾಗಿ ಚರ್ಚೆ ಮಾಡೋಣ. ಸ್ವಲ್ಪ ಇದರ ಹಿನ್ನಲೆ ಏನು, ಏನೇನು ಆಯಿತು, ಟೆಕ್ನಿಕಲ್ ಕಮಿಟಿ ಏಕೆ ಬಂತು, ನಾಲ್ಕು ಜನ ಮುಖ್ಯ ಮಂತ್ರಿಗಳದ್ದು ಏಕೆ ನೇಮಕ ಆಯಿತು, ನಮ್ಮ ಪರಿಸ್ಥಿತಿ ಏನು? ಇದೆಲ್ಲ ಹೇಳದೆ ಕುರುಡುತನದಲ್ಲಿ, ನಾವೇನೂ ನಿರ್ಣಯವನ್ನು ವಿರೋಧ ಮಾಡುತ್ತೇವೆ ಎಂದು ಅಲ್ಲ. ಒಂದು ಪ್ರಶ್ನೆ ಹೇಳತಕ್ಕದ್ದು ಇದೆ. ಆದ್ದರಿಂದ ದಯಮಾಡಿ ಸಮಗ್ರ ಚರ್ಚೆಗೆ ಅವಕಾಶ ಬೇಕು.

ಅಧ್ಯಕ್ಷರು : ಏನು ಮಾಡೋಣ, What do we do? ಸಭಾನಾಯಕರು ಏನು ಹೇಳುತ್ತೀರಿ?

4.50 ಪಿ.ಎಂ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಯತ್ನಾಳ) : ಮಾನ್ಯ ಅಧ್ಯಕ್ಷರೇ, ನಾವು ಆ ಭಾಗದಿಂದ ಬಂದಿರತಕ್ಕವರು. ನಾವೂ ಕೂಡ ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು : ಮಾನ್ಯ ಯತ್ನಾಳ ಅವರೇ, ನಾನು ಕೂಡ ನಿಮ್ಮ ಪರ ಇದ್ದೇನೆ. ನಾನು ಸ್ವಲ್ಪ ಇಕ್ಕಟ್ಟಿನಲ್ಲಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಅವರು ಚರ್ಚೆಯನ್ನು ಏತಕ್ಕೆ ಮಾಡಬೇಕೆಂದಿದ್ದಾರೆನ್ನುವುದು ನನಗೆ ಗೊತ್ತು. ಅದಕ್ಕೆ ನನ್ನ ವಿರೋಧವಿಲ್ಲ. ನಾನು ಉತ್ತರ ಕೊಡುವುದಕ್ಕೂ ತಯಾರಿದ್ದೇನೆ. ಮಾನ್ಯ ಮೊಯಿಲಿಯವರು ಹೇಳಿದಹಾಗೆ, ಈ ನಿರ್ಣಯವನ್ನು ಅಡಾಪ್ಟ್ ಮಾಡಿಕೊಂಡು, ಈ ನಿರ್ಣಯಕ್ಕೆ ಕಾರಣವಾದಂತಹ ಕೆಲವು ಸಮಸ್ಯೆಗಳನ್ನು ಅವರು ಹೇಳಬಹುದು, ಮಾನ್ಯ ವಾಟಾಳ್ ನಾಗರಾಜ್‌ರೂ ಹೇಳಬಹುದು. ಯಾವ ಯಾವ ಮುಖ್ಯಮಂತ್ರಿಗಳು ಏನು ಹೇಳಿದರು, ನಾನೇನು ಹೇಳಿದ್ದೆ.

ಶ್ರೀ ವಾಟಾಳ್ ನಾಗರಾಜ್ : ತಾವು ದಯಮಾಡಿ ಸಿಟ್ಟುಮಾಡಿಕೊಳ್ಳಬಾರದು. ತಾವು ಸಿಟ್ಟುಮಾಡಿಕೊಂಡರೆ ಒಳ್ಳೆಯದಲ್ಲ. ದಯಮಾಡಿ, ನಾನು ತಮಗೆ ಅತ್ಯಂತ ಕಳಕಳಿಯಿಂದ ಎರಡು ಕೈಜೋಡಿಸಿ, ಈ ರಾಜ್ಯದ ಜನತೆ ಪರವಾಗಿ ಕೈಮುಗಿಯುತ್ತೇನೆ. ತಾವು ಸಿಟ್ಟುಕೊಳ್ಳುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ ಮತ್ತು ನಿಮ್ಮವರೆಲ್ಲಾ ಕೂಗಿಕೊಳ್ಳುವುದರಿಂದಲೂ ಸಮಸ್ಯೆ ಬಗೆಹರಿಯುವುದಿಲ್ಲ. ಏನು ಕೂಗಿಕೊಳ್ಳುತ್ತೀರಿ, ಏಕೆ ಕೂಗಿಕೊಳ್ಳುತ್ತೀರಿ. ಏನು ಸಮಸ್ಯೆ ಬಗೆಹರಿಯುತ್ತದೆ. ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಇದು ಸಮಗ್ರವಾಗಿ ಚರ್ಚೆಯಾಗಬೇಕು.

ಅಧ್ಯಕ್ಷರು : ನಾನು ಪದೇ ಪದೇ ತಮಗೆ ಹೇಳುತ್ತಿದ್ದೇನೆ. ರಾಷ್ಟ್ರಪತಿಗಳು ಬರುತ್ತಿದ್ದಾರೆ,5 ಗಂಟೆಗೆ ಇಲ್ಲಿ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಅದಕ್ಕೆ ಏನಾದರೊಂದು ಮಾರ್ಗ ಹೇಳಿ ಎಂದರೆ, ಎಲ್ಲರೂ ಎದ್ದುನಿಂತುಕೊಳ್ಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನನ್ನದೊಂದೇ ಸಲಹೆ. ಈಗ ಸಭೆಯನ್ನು ಮುಂದೂಡಿ, ಅಲ್ಲಿ ಮೀಟಿಂಗ್ ಮುಗಿದ ಮೇಲೆ, ಒಂದು ತಾಸಾದ ಮೇಲೆ ಪುನಃ ಸೇರೋಣ, ಇವತ್ತೇ ಬೇಕಾದರೆ ಅಡಾಪ್ಟ್ ಮಾಡಿಕೊಳ್ಳೋಣ. ಒಂದು ಸಾರಿ ಅದು ಅಡಾಪ್‌ಷನ್‌ಆದಮೇಲೆ, ಅದು ಅಕೆಪ್ಟ್ ಆಯಿತು. ಮುಗಿಯಿತು, ಮತ್ತೆ ಏಕೆ ಚರ್ಚೆಗೆ ಬರುತ್ತದೆ. ನಿಮಗೇನು ತೊಂದರೆ, ಅಲ್ಲಿ ಕಾರ್ಯಕ್ರಮ ಮುಗಿದ ನಂತರ 3 ತಾಸು, 4ತಾಸು ಕೂಡೋಣ. ನಾವು ಮೊನ್ನೆ 10 ಗಂಟೆಯವರೆಗೂ ಕುಳಿತಿಲ್ಲವೇ, ಮುಖ್ಯಮಂತ್ರಿಗಳು ಬಂದಿಲ್ಲವೇ? ಇದನ್ನು ಚರ್ಚೆ ಮಾಡುವುದಕ್ಕೇನು ತೊಂದರೆ, ಇದನ್ನು ಎಲ್ಲರೂ ಒಪ್ಪಿಕೊಂಡಂಥ ಮಾತಿದೆಯಲ್ಲ. ಈಗ ಸಭೆಯನ್ನು ಮುಂದೂಡಿ, ನಂತರ ಮತ್ತೆ 6 ಗಂಟೆಗೆ ಸೇರೋಣ. ಇಲ್ಲ ಅಂದರೆ, ನನ್ನದೊಂದು ಸಲಹೆ. ಸೋಮವಾರದ ದಿವಸ ಪ್ರಶ್ನೋತ್ತರಕ್ಕೆ ಮುಂದೆ ಇದೇ ಚರ್ಚೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರೆ, ಅದೂ ಆಗಬಹುದು. ಇಲ್ಲದೇ ಹೋದರೆ, ಏನಾಗುತ್ತದೆಂದರೆ, ಇದು ಚರ್ಚೆಗೆ ಆಸ್ಪದವೇ ಇಲ್ಲದಂತಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಇದನ್ನು ಈಗ ಅಡಾಪ್ಟ್ ಮಾಡಿ, ಸೋಮವಾರ ಚರ್ಚೆ ಮಾಡೋಣ.

ಶ್ರೀ ಆರ್. ನಾರಾಯಣ್ : ಮಾನ್ಯ ಅಧ್ಯಕ್ಷರೇ, ಇವತ್ತೇ ನಿರ್ಣಯವನ್ನು ಪಾಸ್ ಮಾಡಬೇಕೆಂದು ಮಾಜಿ ಮುಖ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಆದರೆ, ಇದರ ಬಗ್ಗೆ ಚರ್ಚೆಯಾಗಲೇಬೇಕೆಂದು ನಮ್ಮ ನಾಯಕರಾದ ಖರ್ಗೆಯವರು ಹಾಗೂ ವಾಟಾಳ್ ನಾಗರಾಜ್‌ರು ಪಟ್ಟು ಹಿಡಿದಿದ್ದಾರೆ. ಇದಕ್ಕೆ ನಿಜವಾದ ಪರಿಹಾರ, ಇವತ್ತು ನಾವು ಈ ನಿರ್ಣಯವನ್ನು ಪಾಸ್ ಮಾಡದೇಹೋದರೆ, it is sending a wrong message to the people. ನಮ್ಮ ಸೀರಿಯಸ್‌ನೆಸ್‌ನ್ನೂ ಪ್ರಶ್ನೆ ಮಾಡಿದಹಾಗೆ ಆಗುತ್ತದೆ. ನಮ್ಮ ಪ್ರಾಮುಖ್ಯತೆ ಮತ್ತು ಗಾಂಭೀರ್ಯತೆಯನ್ನು ನಾವು ಅದಕ್ಕೆ ಕೊಡಲೇಬೇಕಾಗುತ್ತದೆ. ನಾವು ಮೊನ್ನೆ ಧರಣಿ ಮಾಡಿ, ರಾತ್ರಿ 10 ಗಂಟೆಯವರೆಗೂ ಕುಳಿತಿದ್ದೆವು. ಈಗ ತಾವು ದಯಮಾಡಿ, ಸಭೆಯನ್ನು ಮುಂದೂಡಿ, ನಂತರ 7 ಗಂಟೆಗೆ ಮತ್ತೆ ಸೇರಿ 2-3 ಗಂಟೆಗಳ ಕಾಲ ಚರ್ಚೆ ಮಾಡೋಣ. ಇಲ್ಲದೇ ಹೋದರೆ ವಿಧಿಯೇ ಇಲ್ಲ. ಬೇರೆ ಮಾರ್ಗವೇ ಇಲ್ಲ.

ಒಬ್ಬ ಸದಸ್ಯರು : ಅಧ್ಯಕ್ಷರೇ, ನಾವು ಎ.ಪಿ.ಎಂ.ಸಿ. ಚುನಾವಣೆಗೆ ಹೋಗಬೇಕು.

ಶ್ರೀ ಆರ್. ನಾರಾಯಣ್ : 2 ಗಂಟೆ ಚರ್ಚೆಯಾಗಿ ಇವತ್ತೇ ನಿರ್ಣಯ ಪಾಸ್ ಮಾಡಬೇಕು. ದಯಮಾಡಿ, ಇದನ್ನು ಮುಂದೂಡುವುದರಿಂದ ರಾಂಗ್ ಮೆಸೇಜ್ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು : ಸ್ವಲ್ಪ ಕುಳಿತುಕೊಳ್ಳಿ. ಏಕೆ ನೀವು ಇವತ್ತು ಓವರ್ ಆಕ್ಟೀವ್ ಆಗಿದ್ದೀರಿ. Kindly come to my rescue. ದಿವಸ ಹೀಗೆಯೇ ಇದ್ದರೆ ನನಗೂ ಖುಷಿಯಾಗುತ್ತದೆ. ಒಂದೊಂದು ದಿವಸ ಈ ರೀತಿ ಆಗುತ್ತೀರಿ, ಇದರಿಂದ ನನಗೆ ಸಮಸ್ಯೆಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಅಭಿಪ್ರಾಯವನ್ನು ಹೇಳಿದ್ದೇವೆ. ಸೋಮವಾರ ಮುಂಜಾನೆ ನೀವು ಮಾಡುತ್ತೇವೆಂದು ಹೇಳಿದರೆ....

ಶ್ರೀ ಎಂ. ವೀರಪ್ಪ ಮೊಯಿಲಿ : ಇವತ್ತು ಅಡಾಪ್ಟ್ ಮಾಡಿ. ಇಲ್ಲದೇಹೋದರೆ, ಇದರ ಬಗ್ಗೆ ಭಿನ್ನಾಭಿಪ್ರಾಯವಿದೆಯೆಂದು ರಾಂಗ್ ಮೆಸೇಜ್ ಹೋಗುತ್ತದೆ. ಇಲ್ಲದೇ ಹೋದರೆ, ಇವತ್ತು ಇದನ್ನು ತೆಗೆದುಕೊಳ್ಳಲೇ ಬಾರದಿತ್ತು. Having taken it, if you don't pass the resolution, what do the people think about it ?

ಅಧ್ಯಕ್ಷರು : ನಾನು ಈಗ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ. ನಿರ್ಣಯ ಏನೆಂದರೆ, " ಕೃಷ್ಣಾ ನದಿ ನ್ಯಾಯಾಧೀಕರಣವು ತನ್ನ 1973ರ ವರದಿ ಹಾಗೂ 1976ರ ಮುಂದಿನ ವರದಿಗಳಲ್ಲಿ ಶೇಕಡ 75ರ ಆಧಾರದ ಅನುಸಾರ ಪ್ರಮಾಣವಾದ ಲಭ್ಯತೆ ಇರುವ 2060 ಟಿ.ಎಂ.ಸಿ. ಪ್ರಮಾಣದಷ್ಟು ನೀರನ್ನು ಸ್ಕೀಮ್ 'ಎ' ಅನುಸಾರ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರದೇಶ ರಾಜ್ಯಗಳಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಿದೆ.

ಮಹಾರಾಷ್ಟ್ರ	---	650	ಟಿ.ಎಂ.ಸಿ.
ಕರ್ನಾಟಕ	---	700	ಟಿ.ಎಂ.ಸಿ.
ಆಂಧ್ರಪ್ರದೇಶ	---	800	ಟಿ.ಎಂ.ಸಿ

ಸದರಿ ನ್ಯಾಯಾಧೀಕರಣವು, ಹೆಚ್ಚುವರಿ ನೀರಿನ ಅಂದರೆ 2060 ಟಿ.ಎಂ.ಸಿ. ಪ್ರಮಾಣಕ್ಕಿಂತ ಹೆಚ್ಚುವರಿ ಆದ ನೀರನ್ನು ಮೂರೂ ರಾಜ್ಯಗಳಿಗೆ ಸ್ಕೀಮ್ 'ಬಿ' ಅನುಸಾರ ಈ ಕೆಳಗೆ ಸೂಚಿಸಿರುವ ಪ್ರಮಾಣದಂತೆ ಹಂಚಿಕೆ ಮಾಡಬೇಕೆಂದು ಸಹ ತಿಳಿಸಿದೆ.

2060 ಟಿ.ಎಂ.ಸಿ.ಗೆ ಮೇಲ್ಪಟ್ಟು ಹಾಗೂ 2130 ಟಿ.ಎಂ.ಸಿ. ವರೆಗಿನ ನೀರನ್ನು

ಕರ್ನಾಟಕ	---	50
ಮಹಾರಾಷ್ಟ್ರ	---	35
ಆಂಧ್ರಪ್ರದೇಶ	---	15

2130 ಟಿ.ಎಂ.ಸಿ. ಪ್ರಮಾಣಕ್ಕಿಂತ ಹೆಚ್ಚುವರಿಯಾದ ನೀರನ್ನು

ಕರ್ನಾಟಕ	---	50
ಮಹಾರಾಷ್ಟ್ರ	---	25
ಆಂಧ್ರಪ್ರದೇಶ	---	25

ಸದರಿ ನ್ಯಾಯಾಧೀಕರಣವು ತನ್ನ ವರದಿಯಲ್ಲಿ(ಸಂಪುಟ - IIಪುಟ 166) ಕೆಳಕಂಡಂತೆ ಹೇಳಿದೆ.

> ``After deeply pondering over the matter we have come to the conclusion that it would be better if we devise two schemes for the division of the waters of the river Krishna between the States of Maharashtra, Mysore and Andhra Pradesh. These schemes will be called Schemes `A' and `B' Scheme `A' will come in operation on the date of the publication of the decision of this Tribunal] in the Official Gazetter under Section 6 of the Inter State Water Disputes Act, 1956. Scheme `B' may be brought into operation in case the States of Maharashtra, Mysore and Andhra Pradesh constitute an inter-state administrative authority which may be called the Krishna Valley Authority by agreement is constituted by legislation made by Parliament. Scheme `A' does not at all depend upon the agreement of the parties and come into operation by virtue of the order of the Tribunal. It is altogether independent of Schemes `B''`.

ಭಾರತ ಸರ್ಕಾರವು 2060 ಟಿ.ಎಂ.ಸಿ. ನೀರನ್ನು ರಾಜ್ಯಗಳಿಗೆ ಹಂಚುವ ಸ್ಕೀಮ್ 'ಎ' ಅನ್ನು ಮಾತ್ರ ಅನುಷ್ಠಾನಗೊಳಿಸಿದೆ. ಈ ಮಧ್ಯೆ ಆಂಧ್ರ ಪ್ರದೇಶವು ಸ್ಕೀಮ್'ಬಿ' ಯನ್ನು ಕಾರ್ಯಗತಗೊಳಿಸುವುದಕ್ಕೆ ತನ್ನ ಒಪ್ಪಿಗೆಯನ್ನು ನಿರಾಕರಿಸುತ್ತಾ ಏಕಸ್ವಾಮ್ಯವಾಗಿ ಮತ್ತು ಕಾನೂನಿಗೆ ವಿರುದ್ಧವಾಗಿ ಹೆಚ್ಚುವರಿ ಉಳಿಕೆ ನೀರನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಹಲವಾರು ಯೋಜನೆಗಳನ್ನು ರೂಪಿಸಿ, ಇವುಗಳಿಗೆ ಸಂಬಂಧಪಟ್ಟ ಶಾಶ್ವತವಾದ ಕಾಮಗಾರಿಗಳನ್ನು ಕೈಗೊಂಡಿದೆ, ಈ ಕಾಮಗಾರಿಗಳು ಯಾವುವೆಂದರೆ, ತೆಲಗುಗಂಗಾ ಯೋಜನೆ, ಶ್ರೀ ಶೈಲಂ ಎಡದಂಡೆ ಕಾಲುವೆ ಯೋಜನೆ, ಶ್ರೀ ಶೈಲಂ ಬಲದಂಡೆ ಕಾಲುವೆ ಯೋಜನೆ, ಭೀಮ ಏತ ನೀರಾವರಿ ಯೋಜನೆ ಮತ್ತು ಪುಲಚಿಂತಲಾ ಡೈವರ್ಷನ್ ಯೋಜನೆ.

ಆದುದರಿಂದ ಭಾರತ ಸರ್ಕಾರವನ್ನು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ಕೋರಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸಿದೆ.

ಅ) ನ್ಯಾಯಾಧೀಕರಣದ ತೀರ್ಪಿನಲ್ಲಿ ತಿಳಿಸಿರುವ ಮಾರ್ಗಸೂಚಿಯ ಕಟ್ಟುನಿಟ್ಟಿಗೆ ಒಳಪಟ್ಟಂತೆ ಹಾಗೂ ಇತರೆ ಯಾವುದೇ ಸಂಬಂಧಪಡದ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಸ್ಕೀಮು 'ಬಿ' ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಆ) ತೆಲಗುಗಂಗಾ ಯೋಜನೆ (ಮದ್ರಾಸ ಕುಡಿಯುವ ನೀರಿನ ಪೂರೈಕೆಗಾಗಿ ಸಂಬಂಧಪಟ್ಟ ಯೋಜನೆಯನ್ನು ಹೊರತುಪಡಿಸಿ) ಶ್ರೀ ಶೈಲಂ ಎಡದಂಡೆ ಕಾಲುವೆ ಯೋಜನೆ, ಶ್ರೀ ಶೈಲಂ ಬಲದಂಡೆ ಕಾಲುವೆ ಯೋಜನೆ, ಭೀಮ ಏತ ನೀರಾವರಿ ಯೋಜನೆ ಮತ್ತು ಪುಲಿಚಿಂತಲಾ ಡೈವರ್ಷನ್ ಯೋಜನೆ ಮುಂತಾದ ಯೋಜನೆಗಳಿಗೆ ಆಂಧ್ರ ಪ್ರದೇಶವು ಕೋರಿರುವ ಅನುಮತಿ ಅಥವಾ ಒಪ್ಪಿಗೆಯನ್ನು ನಿರಾಕರಿಸುವುದು : ರದ್ದುಗೊಳಿಸುವುದು.

ಇ) ಸ್ಕೀಮ್'ಬಿ' ಯನ್ನು ಅನುಷ್ಠಾನಗೊಳಿಸುವವರೆಗೆ ಮೇಲ್ಕಂಡ ಯೋಜನೆಗಳ ಕಾಮಗಾರಿಗಳನ್ನು ತತಕ್ಷಣ ನಿಲ್ಲಿಸುವಂತೆ ಆಂಧ್ರ ಪ್ರದೇಶಕ್ಕೆ ಆದೇಶ ನೀಡುವುದು. ಇದಲ್ಲದೇ ಯೋಜನಾ ಆಯೋಗವು ನೀಡಿರುವ ಒಪ್ಪಿಗೆಯ ಅನುಸಾರ ಹಾಗೂ ಕರ್ನಾಟಕ ರಾಜ್ಯದ ಹಕ್ಕಿಗೆ ಒಳಪಟ್ಟಿರುವಂತೆ ರೂಪಿಸಿರುವ ಹಾಗೂ ಕೈಗೊಂಡಿರುವ ಆಲಮಟ್ಟಿ ಆಣೆಕಟ್ಟಿನ ನಿರ್ಮಾಣದ ಕಾರ್ಯಕ್ಕೆ ಆಂಧ್ರ ಪ್ರದೇಶವಾಗಲೀ ಅಥವಾ ಯಾರೇ ಆಗಲಿ ಅಡಚಣೆ ಉಂಟು ಮಾಡುವುದನ್ನು ಈ ಸದನವು ಸಹಿಸುವುದಿಲ್ಲ. ನಿಯೋಜಿಸಿರುವಂತೆ ಕೈಗೊಂಡಿರುವ ಆಲಮಟ್ಟಿ ಆಣೆಕಟ್ಟಿನ ಕಾಮಗಾರಿಗಳನ್ನು ಯಾವುದೇ ಕಾರಣದಿಂದಾಗಿ ಕರ್ನಾಟಕ ಸರ್ಕಾರವು ಸ್ಥಗಿತಗೊಳಿಸಕೂಡದು."

ನಿರ್ಣಯವನ್ನು ಸರ್ವಾನುಮತದಿಂದ ಸಭೆಯು ಅಂಗೀಕರಿಸಿತು.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ, ಸೋಮವಾರ ಬೆಳ್ಳಗ್ಗೆ 10 ಗಂಟೆಗೆ ಸೇರುವುದು.

(ಸದನವು, ಸಂಜೆ 4 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 24-3-97ನೇ ಸೋಮವಾರ ಬೆಳಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).